**ಅ. ದಾ. ಸಂ. ಃ367/2017**
**ಪಿ . ಡಬ್ಲ್ಯೂ ಃ 01**

**ದಿನಾಂಕ ಃ 04-07-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ-ಪ್ರತಿವಾದಿಗಳ ಪರ ಶ್ರೀ.ಎಸ್.ಹೆಚ್, ವಕೀಲರಿಂದ ಃ-**

1. ನನ್ನ ತಾತನ ಹೆಸರು ಮಾರಯ್ಯ. ನನ್ನ ತಾತನವರಿಗೆ ಒಟ್ಟು 3 ಜನ ಮಕ್ಕಳು ಇದ್ದಾರೆ. ಅವರ ಹೆಸರುಗಳು ರೇವಣ್ಣ, ಮಾರಯ್ಯ ಮತ್ತು ರೇವಣ್ಣ. ನನ್ನ ತಾತನವರಿಗೆ ಒಟ್ಟು ಎಷ್ಟು ಎಕರೆ ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಾತನವರಿಗೆ ನೇತನಹಳ್ಳಿ ಗ್ರಾಮದಲ್ಲಿ ಜಮೀನು ಇತ್ತು. ನನ್ನ ತಾತನವರಿಗೆ ನೇತನಹಳ್ಳಿ ಗ್ರಾಮದಲ್ಲಿ ಮನೆಗಳು ಇದೆ. ನನ್ನ ತಾತನವರಿಗೆ ಸೇರಿದ ಮನೆಗಳು ಮತ್ತು ಜಮೀನನ್ನು ಅವರ ಮಕ್ಕಳುಗಳು ವಿಭಾಗವನ್ನು ಮಾಡಿಕೊಂಡಿದ್ದಾರೆ. ಸದರಿ ವಿಭಾಗದಂತೆ ಮೂರು ಜನ ಮಕ್ಕಳು ಸಹ ಪ್ರತ್ಯೇಕವಾಗಿ ಅವರ ಹೆಸರಿಗೆ ಖಾತೆಯನ್ನು ಮಾಡಿಕೊಂಡಿದ್ದಾರೆ ಎಂದರೆ ನಾವು ಮಾಡಿಕೊಂಡಿಲ್ಲ. ವಾದಿಯು ಅವರ ಭಾಗಕ್ಕೆ ಬಂದಿರುವ ಆಸ್ತಿಯನ್ನು ಅವರ ತಮ್ಮನಾದ ರೇವಣ್ಣನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿಯು ವಾಸವಿರುವ ಮನೆ ಅವರಿಗೆ ವಿಭಾಗ ಪ್ರಕಾರ ಬಂದಿರುತ್ತದೆ ಎಂದರೆ ಸ್ವಲ್ಪ ಬಂದಿರುತ್ತದೆ.

2. ನನ್ನ ಚಿಕ್ಕಪ್ಪನಾದ ಮಾರಯ್ಯನವರ ಹೆಸರಿಗೆ ಇರುವ ಮನೆಗೆ ಸಂಬಂಧಿಸಿದಂತೆ ಅವರಿಗೆ ಖಾತೆ ಆಗಿ ಅದೇ ಮನೆಯಲ್ಲಿ ವಾಸಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಿಭಾಗವಾದ ಬಳಿಕ ನನ್ನ ಚಿಕ್ಕಪ್ಪನವರು ಅವರ ಸಂಸಾರದೊಂದಿಗೆ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ.

1 ನೇ ಪ್ರತಿವಾದಿಯು ನನ್ನ ಚಿಕ್ಕಮ್ಮ ಮತ್ತು ಅವರು ಯಾವಾಗಲೂ ಮನೆಯಲ್ಲೆ ಇರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ, ಮಾಗಡಿ.**